ಸಕಾರಾತ್ಮಕ ಚಿಂತನೆಗಳನ್ನು ಬೆಳೆಸಿಕೊಳ್ಳಿ. ನಿರಾಶಾಭಾವನೆಯನ್ನೇ ತುಂಬ ನೆಚ್ಚಿಕೊಂಡಿದ್ದರೆ, ಇಡೀ ದೇಶವು ವಿನಾಶವಾಗುತ್ತದೆ! ಇದೇಕೆ ಹೀಗೆ? ಪ್ರತಿಯೊಬ್ಬ ಜೀವಿಯಲ್ಲಿಯೂ ಅನಂತ ಶಕ್ತಿಯಿರುವುದು. ಅಂಥ ನೀವು ನಕಾರಾತ್ಮಕ ಭಾವನೆಗಳನ್ನು ಕೂಡಿಟ್ಟುಕೊಂಡು, ನಾಯಿ ಬೆಕ್ಕುಗಳಂತಾಗುವಿರೇನು? ಈ ಬಗೆಯ ನಿರಾಶಾವಾದವನ್ನು ಯಾರು ನಿಮಗೆ ಬೋಧಿಸುತ್ತಿದ್ದಾರೆ? ಈ ಬಗೆಯ ಆತ್ಮನಿಂದಕ ಮನೋಭಾವವು ನಮಗಿರುವ ವ್ಯಾಧಿಯ ಇನ್ನೊಂದು ಹೆಸರೇ ಸರಿ – ಇದನ್ನು ವಿನಯವೆಂದು ಕರೆಯುತ್ತೀರೇನು? ಇದು ಮರೆಮಾಚಿದ ಅಹಂಕಾರವಲ್ಲದೆ ಮತ್ತೇನಲ್ಲ! ಅಗ್ನಿಜ್ವಾಲೆಯ ಹಾಗೆ ಈ ಭೂಮಿಯ ಮೇಲೆ ಧುಮುಕಿರಿ! ನಿಮ್ಮ ಭಾರಕ್ಕೆ ಇಡೀ ಪ್ರಪಂಚವು ಎರಡಾಗಿ ಬಿರಿದುಬಿಡುವುದು!!

–ಸ್ವಾಮಿ ವಿವೇಕಾನಂದ




*With Best Compliments from :*

**M/s P. BALASUBBA SETTY & SON**

MINE OWNERS
P.B. No. 03, HAMPI ROAD
HOSPET - 583 201
Bellary District, Karnataka
Phone: 08394 228332, Fax: 08394 226853
Email: pbsandson@gmail.com

# ವ್ಯಾಕುಲತೆ

ಶ್ರೀರಾಮಕೃಷ್ಣರು ಧರ್ಮವೆಂದರೆ ದೇವರಲ್ಲಿ ನಂಬಿಕೆ ಮಾತ್ರವೇ ಎಂದು ಎಣಿಸಿದವರಲ್ಲ. ದೇವರಿದ್ದರೆ ಅವನನ್ನು ಕಾಣಬೇಕು; ಅವನನ್ನು ಸಾಕ್ಷಾತ್ಕರಿಸಿಕೊಳ್ಳಬೇಕು; ಇಲ್ಲದಿದ್ದರೆ ಮಾನವನಾಗಿ ಹುಟ್ಟಿದ್ದು ವ್ಯರ್ಥ ಎಂದು ಅವರ ಅಭಿಪ್ರಾಯ. ದೇವರನ್ನು ನೋಡುವುದಕ್ಕೆ ಸಾಧನೆ ಮಾಡಬೇಕು; ಸಾಧನೆಯಲ್ಲಿ ಉತ್ಕಟತೆ ಇರಬೇಕು; ಭಗವಂತನನ್ನು ಬಿಟ್ಟು ನನಗೆ ಏನೂ ಬೇಡ ಎಂಬ ಅನನ್ಯಭಾವ ಇರಬೇಕು; ಬೇರೆ ಯಾವ ಪ್ರಾಪಂಚಿಕ ಆಸೆಗಳಿಗೂ ಅಲ್ಲಿ ಸ್ಥಾನವಿರಬಾರದು; ಈ ಜೀವನದಲ್ಲಿಯೇ ಭಗವಂತನನ್ನು ಕಾಣಬೇಕು ಎಂಬ ಕಾತರ ಇರಬೇಕು. ಇದು ಶ್ರೀರಾಮಕೃಷ್ಣರ ನಿಲುವು. ಹೀಗೆ ಭಗವತ್ಸಾಕ್ಷಾತ್ಕಾರಕ್ಕಾಗಿ **ಪರಿಪೂರ್ಣ ಪ್ರಾಮಾಣಿಕತೆ, ಅದಮ್ಯ ಅನನ್ಯತೆ, ತುಂಬು ಕಾತರತೆ** – ಇವುಗಳು ಮೈದೋರಿದ ಮಾನಸಿಕಸ್ಥಿತಿಯನ್ನು ಅವರು ತಮ್ಮ ಸಾಧನಾಜೀವನದ ಪ್ರಾರಂಭದಲ್ಲಿಯೇ ವ್ಯಕ್ತಪಡಿಸುತ್ತಾರೆ. ಈ ಅಂಶಗಳೇ ಶ್ರೀರಾಮಕೃಷ್ಣರು ಬೋಧಿಸಿದ 'ವ್ಯಾಕುಲತಾ ಯೋಗದ' ದ ಆಧಾರಸ್ತಂಭಗಳು ಕೂಡ.

ಉಪನಿಷತ್ತುಗಳು ಸಾಧನೆಯಲ್ಲಿ ವ್ಯಾಕುಲತೆಯ ಮಹತ್ವವನ್ನು ಎತ್ತಿಹಿಡಿಯುತ್ತವೆ. ಕಠೋಪನಿಷತ್ತು, ಯಾರು ಈ ಶರೀರ ಬಿದ್ದುಹೋಗುವುದಕ್ಕೆ ಮುಂಚೆಯೇ ಬ್ರಹ್ಮವನ್ನು ತಿಳಿದುಕೊಳ್ಳಲು ಶಕ್ತನಾಗುತ್ತಾನೆಯೋ, ಅವನು ಸಂಸಾರ ಬಂಧನದಿಂದ ಪಾರಾಗುತ್ತಾನೆ ಎಂದು ಹೇಳುತ್ತದೆ. ಹಾಗೆಯೇ ಆತ್ಮನು ಪ್ರವಚನದಿಂದಾಗಲಿ, ಮೇಧಾಶಕ್ತಿಯಿಂದಾಗಲಿ, ಬಹಳವಾಗಿ ವಿಚಾರವನ್ನು ಕೇಳುವುದರಿಂದಾಗಲಿ ಲಭ್ಯನಲ್ಲ; ಸಾಧಕನು ಪ್ರಾರ್ಥನೆ ಮಾಡಿಕೊಂಡಾಗ ಮಾತ್ರ ಅವನು ಲಭ್ಯನು; ಅವನಿಗೆ ಮಾತ್ರವೇ ಆತ್ಮವು ತನ್ನ ಯಥಾರ್ಥರೂಪವನ್ನು ತೋರುತ್ತದೆ ಎನ್ನುತ್ತದೆ. ಅದಕ್ಕಾಗಿ, "ಏಳಿ, ಎಚ್ಚರಗೊಳ್ಳಿರಿ, ಶ್ರೇಷ್ಠರಾದ ಆಚಾರ್ಯರ ಬಳಿ ಹೋಗಿ ತಿಳಿದುಕೊಳ್ಳಿರಿ" ಎಂದು ನಮಗೆ ಕರೆಕೊಡುತ್ತದೆ.

ಭಗವದ್ಗೀತೆಯಲ್ಲಿಯೂ, ಶ್ರೀಕೃಷ್ಣನು ಅನೇಕ ಕಡೆಗಳಲ್ಲಿ ವ್ಯಾಕುಲತೆಯ ಬಗ್ಗೆ ಪ್ರಸ್ತಾಪಿಸುತ್ತಾನೆ. ಯಾರು ಪ್ರಯತ್ನದಿಂದ ಅಭ್ಯಾಸ ಮಾಡುತ್ತಾರೆಯೋ, ಅಂತಹ ಯೋಗಿಯು ಪರಮಗತಿಯನ್ನು ಹೊಂದುತ್ತಾನೆ ಎಂದು ಒಂದು ಕಡೆ ಶ್ರೀಕೃಷ್ಣನು ಹೇಳುತ್ತಾನೆ (೬:೪೫) ; ಯೋಗವನ್ನು ನಿಶ್ಚಯವಾದ ಮತ್ತು ಉತ್ಸಾಹಯುಕ್ತವಾದ ಮನಸ್ಸಿನಿಂದ ಅಭ್ಯಾಸ ಮಾಡಬೇಕು ಎಂದು ಇನ್ನೊಂದು ಕಡೆ (೬:೨೩) ಕರೆಕೊಡುತ್ತಾನೆ. "ಅರ್ಜುನ, ಅನನ್ಯವಾದ ಭಕ್ತಿಯಿಂದ ಮಾತ್ರವೇ ನನ್ನನ್ನು ತಿಳಿದುಕೊಳ್ಳಲು ಸಾಧ್ಯ" (೧೧:೫೪) ಎಂದು ಮತ್ತೊಂದು ಕಡೆ ಹೇಳುತ್ತಾನೆ. ಇದಲ್ಲದೆ, "ನನ್ನಲ್ಲಿಯೇ ಮನಸ್ಸುಳ್ಳವನಾಗು, ನನ್ನ ಭಕ್ತನಾಗಿ ನನ್ನನ್ನೇ ಪೂಜಿಸುವವನಾಗು. ನನ್ನನ್ನೇ ನಮಸ್ಕರಿಸು. ಹೀಗೆ ನನ್ನನ್ನೇ ಪರಮಗತಿಯೆಂದು ನೀನು ಭಾವಿಸಿದರೆ, ನನ್ನಲ್ಲೇ ಮನಸ್ಸನ್ನು ನಿಲ್ಲಿಸಿ, ನನ್ನನ್ನೇ ಪಡೆಯುತ್ತೀಯೆ (೯:೩೪)" ಎಂದು ಶ್ರೀಕೃಷ್ಣನು ಬೋಧಿಸುತ್ತಾನೆ.

ಭಾಗವತವಂತೂ ಭಗವಂತನಿಗಾಗಿನ ತೀವ್ರ ಆಕಾಂಕ್ಷೆ ಮತ್ತು ವ್ಯಾಕುಲತೆಯ ಭಾವನೆಯನ್ನು ಅತ್ಯಂತ ಹೃದಯಂಗಮವಾಗಿ ಹಲವಾರು ಸಂದರ್ಭಗಳಲ್ಲಿ ಬಿಂಬಿಸುತ್ತದೆ. ಒಬ್ಬ ಮನುಷ್ಯನು ಆಶಾರಹಿತನಾಗಿರಲಿ ಅಥವಾ ಆಶಾಸಹಿತನಾಗಿರಲಿ – ಅವನಿಗೆ ಮೋಕ್ಷದಲ್ಲಿ ಆಸಕ್ತಿ ಇದ್ದು, ಅವನು ಉದಾರಬುದ್ಧಿಯುಳ್ಳವನಾಗಿದ್ದರೆ, ತೀವ್ರವಾದ ಭಕ್ತಿಯೋಗದ ಮೂಲಕ ಪರಮಪುರುಷನನ್ನು ಹೊಂದುವನು ಎಂದು ಶ್ರೀ ಶುಕಮಹರ್ಷಿಯು ಹೇಳುವನು (೨.೩.೧೦). ಕಪಿಲ ಮಹರ್ಷಿ ಕೂಡ ಈ ಕೆಳಗಿನ ಶ್ಲೋಕದಲ್ಲಿ ಸಾಧನೆಯ ತೀವ್ರತೆಯನ್ನು, ಅನನ್ಯತೆಯನ್ನು ಒತ್ತಿಹೇಳುತ್ತಾನೆ: **ವಿಸೃಜ್ಯ ಸರ್ವಾನ್ ಅನ್ಯಾಂಶ್ಚ ಮಾಮೇವ ವಿಶ್ವತೋಮುಖಮ್ । ಭಜಂತ್ಯನನ್ಯಯಾ ಭಕ್ತ್ಯಾ ತಾನ್ ಮೃತ್ಯೋರತಿಪಾರಯೇ ॥** (೩.೨೫.೩೯) – "ಬೇರೆ ಎಲ್ಲವನ್ನೂ ತ್ಯಜಿಸಿ, ವಿಶ್ವವ್ಯಾಪಕನಾದ ನನ್ನನ್ನು ಅನನ್ಯಭಾವದಿಂದ (ಬೇರೆ ಯಾವ ಆಲೋಚನೆಯೂ ಇಲ್ಲದೆ) ಯಾರು ಭಕ್ತಿಯಿಂದ ಸೇವಿಸುತ್ತಾರೋ, ಅವರನ್ನು ಸಂಸಾರವೆಂಬ ಮೃತ್ಯುವಿನಿಂದ ನಾನು ಪಾರುಮಾಡುತ್ತೇನೆ."

ಈ ವಿಚಾರವನ್ನೇ ತಮ್ಮದೇ ಆದ ವಿಶಿಷ್ಟವಾದ ಶೈಲಿಯಲ್ಲಿ ಶ್ರೀರಾಮಕೃಷ್ಣರು ಬಹಳ ಮನೋಜ್ಞವಾಗಿ ಉಪದೇಶಿಸುತ್ತಾರೆ. "ದೇವರನ್ನು ಪಡೆಯಬೇಕಾದರೆ ಎಂತಹ ಪ್ರೇಮ ಬೇಕು ಗೊತ್ತಿದೆಯೇ? ತಲೆಗೆ ಗಾಯವಾದ ನಾಯಿ ಭಯದಿಂದ ಓಡುವಂತೆ ಭಗವಂತನಿಗಾಗಿ ನಾವು ವ್ಯಥೆ ಪಡಬೇಕು", "ನೀರಿನಲ್ಲಿ ಮುಳುಗಿರುವವನು ಉಸಿರಾಡುವುದಕ್ಕೆ ಆಶಿಸುವಂತೆ ನಾವು ದೇವರನ್ನು ಕಾಣುವುದಕ್ಕೆ ಹಂಬಲಿಸಬೇಕು" ಎಂದು ಅವರು ಹೇಳುತ್ತಾರೆ. ಆಧ್ಯಾತ್ಮಿಕ ಸಾಧನೆಯಲ್ಲಿ ಸೋಮಾರಿತನ ಸಲ್ಲದು. ಮೋಕ್ಷವು ಈ ಜನ್ಮದಲ್ಲಿ ಇಲ್ಲದಿದ್ದರೆ ಇನ್ನೊಂದು ಜನ್ಮದಲ್ಲಿ ಸಿಕ್ಕುವುದು ಎಂಬ ಸೋಮಾರಿತನವೇಕೆ? ಎಂದು ಶ್ರೀರಾಮಕೃಷ್ಣರು ಕೇಳುತ್ತಾರೆ. ಈ ಜನ್ಮದಲ್ಲಿಯೇ ನಾನು ಭಗವಂತನನ್ನು ಕಾಣಬೇಕೆಂಬ ದೃಢ ಪ್ರತಿಜ್ಞೆ ಮಾಡುವವರೆಗೂ

ಗುರಿಯನ್ನು ಮುಟ್ಟಲಾರೆವು ಎಂದು ಅವರು ಒತ್ತಿಹೇಳುತ್ತಾರೆ. ಅಂತಹ ವ್ಯಾಕುಲತೆಯು ಹೇಗಿರುತ್ತದೆ ಎನ್ನುವುದನ್ನು ಶ್ರೀರಾಮಕೃಷ್ಣರು ಹೇಳುವ ಹಲವಾರು ಸ್ವಾರಸ್ಯಕರ ಕಥೆಗಳು ಮತ್ತು ದೃಷ್ಟಾಂತಗಳ ಮೂಲಕವೇ ತಿಳಿದುಕೊಳ್ಳಲು ಪ್ರಯತ್ನಿಸೋಣ.

### ವ್ಯಾಕುಲತೆ ಹೇಗಿರುತ್ತದೆ?

ಒಬ್ಬನಿಗೆ ಮಗಳಿದ್ದಳು. ಅವಳು ಬಾಲ್ಯದಲ್ಲಿಯೇ ವಿಧವೆಯಾದಳು. ಅವಳಿಗೆ ತನ್ನ ಗಂಡನ ಪರಿಚಯವೇ ಇರಲಿಲ್ಲ. ತನ್ನ ಇತರ ಸ್ನೇಹಿತೆಯರಿಗೆ ಗಂಡಂದಿರು ಇರುವುದನ್ನು ಅವಳು ನೋಡುತ್ತಿದ್ದಳು. ಒಂದು ದಿನ ಅವಳು ತನ್ನ ತಂದೆಯನ್ನು ಕೇಳಿಯೇಬಿಟ್ಟಳು, "ಅಪ್ಪಾ, ನನ್ನ ಗಂಡ ಎಲ್ಲಿದ್ದಾನೆ?" ಎಂದು. ತಂದೆ ಏನು ತಾನೇ ಹೇಳಿಯಾನು? ಅವನು ಯೋಚಿಸಿ ಹೀಗೆ ಹೇಳಿದನು: " ಗೋವಿಂದನೇ ನಿನ್ನ ಗಂಡ. ನೀನು ಅವನನ್ನು ಕರೆದರೆ ಅವನು ಬರುವನು." ಈ ಮಾತನ್ನು ಕೇಳಿದ ಆ ಬಾಲವಿಧವೆ ತನ್ನ ಕೋಣೆಗೆ ಹೋಗಿ ಬಾಗಿಲನ್ನು ಹಾಕಿಕೊಂಡಳು. "ಗೋವಿಂದ, ನನ್ನ ಬಳಿಗೆ ಬಾ. ನಿನ್ನ ಮುಖವನ್ನು ತೋರು. ನೀನು ಏತಕ್ಕೆ ಬರುವುದಿಲ್ಲ?" ಎಂದು ತೀವ್ರ ಹಂಬಲದಿಂದ ಅತ್ತು ಕರೆದಳು. ಭಗವಂತನು ಈ ಕಾತರದ ಕರೆಯನ್ನು ಕೇಳಿ ಅವಳಿಗೆ ಪ್ರತ್ಯಕ್ಷನಾದನು. ವ್ಯಾಕುಲತೆಯೆಂದರೆ ಈ ರೀತಿಯದ್ದು.

ವ್ಯಾಕುಲತೆ ಎಂದರೆ ಹೇಗಿರುತ್ತದೆ ಎನ್ನುವುದನ್ನು ಇನ್ನೊಂದು ಕಥೆಯ ಮೂಲಕ ಸ್ವಾರಸ್ಯವಾಗಿ ಶ್ರೀರಾಮಕೃಷ್ಣರು ವಿವರಿಸುತ್ತಾರೆ. ಒಬ್ಬ ಶಿಷ್ಯ ಗುರುವನ್ನು ಕೇಳಿದ, "ಸ್ವಾಮಿ, ನಾನು ದೇವರನ್ನು ಪಡೆಯುವ ಬಗೆ ಹೇಗೆ?" ಎಂದು. ಅದಕ್ಕೆ ಗುರು ಹೇಳಿದ, "ನನ್ನ ಜತೆಯಲ್ಲಿ ಬಾ. ನಾನು ನಿನಗೆ ತೋರಿಸುತ್ತೇನೆ." ಗುರು ಶಿಷ್ಯನನ್ನು ಒಂದು ಸರೋವರಕ್ಕೆ ಕರೆದುಕೊಂಡು ಹೋಗುತ್ತಾನೆ. ಇಬ್ಬರೂ ನೀರಿನಲ್ಲಿ ಇಳಿದರು. ಇದ್ದಕ್ಕಿದ್ದಂತೆ, ಗುರುವು ಶಿಷ್ಯನನ್ನು ನೀರಿನಲ್ಲಿ ಮುಳುಗಿಸಿ ಹಿಡಿದುಕೊಂಡುಬಿಟ್ಟನು. ಕೆಲವು ಕ್ಷಣಗಳ ನಂತರ ಅವನನ್ನು ಬಿಟ್ಟನು. ಶಿಷ್ಯನು ಏದುಸಿರು ಬಿಡುತ್ತಿದ್ದನು. ಗುರು ಈಗ ಶಿಷ್ಯನನ್ನು ಕೇಳಿದನು, "ನೀನು ನೀರಿನಲ್ಲಿ ಇದ್ದಾಗ ನಿನಗೆ ಹೇಗೆನಿಸಿತು?" ಅದಕ್ಕೆ ಶಿಷ್ಯ, "ನಾನು ಸತ್ತುಹೋಗುತ್ತಿದ್ದೇನೆ ಎಂದು ಭಾವಿಸಿದೆ. ಉಸಿರಿಗಾಗಿ ಹಾತೊರೆಯುತ್ತಿದ್ದೆ" ಎಂದು ಹೇಳುತ್ತಾನೆ. ಅದಕ್ಕೆ ಗುರುವು ಹೇಳುತ್ತಾನೆ, "ನಿನಗೆ ದೇವರ ವಿಷಯದಲ್ಲಿ ಅಂತಹ ವ್ಯಾಕುಲತೆ ಬಂದರೆ, ನೀನು ಅವನಿಗಾಗಿ ಬಹಳ ಕಾಲ ಪ್ರತೀಕ್ಷೆ ಮಾಡಬೇಕಾಗಿಲ್ಲ ಎನ್ನುವುದು ತಿಳಿದುಬರುತ್ತದೆ." ಇಂತಹ ಹಾತೊರೆಯುವಿಕೆಯನ್ನೇ 'ವ್ಯಾಕುಲತೆ' ಎಂದು ಕರೆಯುವುದು.

### ವ್ಯಾಕುಲತೆಯ ಪ್ರಕಟಣೆ

**೧. ವ್ಯಾಕುಲತೆಯಲ್ಲಿರುವ ತೀವ್ರ ಆಸಕ್ತಿಯಿಂದಲೇ ಸರಿಯಾದ ದಾರಿ ಕಾಣಬರುತ್ತದೆ:** ಯಾವುದೇ ವ್ಯಕ್ತಿಗೆ ಭಗವಂತನನ್ನು ನೋಡುವ ಸರಿಯಾದ ದಾರಿ ತಿಳಿಯದೇ ಇರಬಹುದು. ಆದರೆ ಭಗವಂತನ ಕಡೆಗೆ ಹೋಗಬೇಕು ಎಂಬ ತೀವ್ರ ಇಚ್ಛೆ ಇದ್ದರೆ ಅಷ್ಟೇ ಸಾಕು. ಅಂತಹ ತೀವ್ರ ಭಕ್ತಿಯಿಂದಲೇ ದೇವರನ್ನು ಪಡೆಯಬಹುದು ಎನ್ನುವುದು ಶ್ರೀರಾಮಕೃಷ್ಣರ ಅಭಿಪ್ರಾಯ. ಒಬ್ಬ ಭಕ್ತ ಪುರಿ ಪಟ್ಟಣದಲ್ಲಿರುವ ಜಗನ್ನಾಥಸ್ವಾಮಿಯ ದರ್ಶನಕ್ಕಾಗಿ ಹೊರಟನು. ಅವನಿಗೆ ಹೋಗುವ ದಾರಿ ಗೊತ್ತಿರಲಿಲ್ಲ. ದಕ್ಷಿಣ ದಿಕ್ಕಿಗೆ ಹೋಗುವ ಬದಲು ಅವನು ಪಶ್ಚಿಮ ದಿಕ್ಕಿನ ಕಡೆಗೆ ಹೊರಟನು. ಅವನು ದಾರಿ ತಪ್ಪಿ ಹೋಗುತ್ತಿದ್ದ. ಆದರೆ ಅವನಿಗೆ ಪುರಿಯ ಜಗನ್ನಾಥಸ್ವಾಮಿಯ ದರ್ಶನ ಪಡೆಯಲೇಬೇಕೆಂಬ ತೀವ್ರ ಆಸಕ್ತಿ ಇತ್ತು. ಮಾರ್ಗದಲ್ಲಿ ಸಿಕ್ಕಿದವರನ್ನು ಕೇಳಿದ. ಅವರು ಅವನಿಗೆ ಸರಿಯಾದ ದಾರಿಯನ್ನು ತೋರಿಸಿದರು. "ಈ ದಾರಿಯಲ್ಲಪ್ಪಾ, ಬೇರೆ ದಾರಿ ಹಿಡಿದು ಹೋಗು" ಎಂದರು. ಆ ಭಕ್ತ ಸರಿಯಾದ ದಾರಿ ಹಿಡಿದ. ಜಗನ್ನಾಥ ಪುರಿಯನ್ನು ತಲುಪಿದ. ಈ ಕಥೆ ಹೇಳಿ ಶ್ರೀರಾಮಕೃಷ್ಣರು ಹೇಳುವರು, "ನೋಡಪ್ಪಾ, ನಿನಗೆ ಸರಿಯಾದ ಮಾರ್ಗ ಗೊತ್ತಿಲ್ಲದಿದ್ದರೂ, ಆಸಕ್ತಿ ಇದ್ದರೆ ಸಾಕು. ಯಾರಾದರೂ ನಿನಗೆ ದಾರಿಯನ್ನು ತೋರುವರು." ಅವರೇ ಇನ್ನೊಂದು ಕಡೆ ಹೇಳುತ್ತಾರೆ, "ಜಿಪುಣನಾದವನು ಹಣಕ್ಕಾಗಿ ಆಸೆ ಪಡುವಂತೆ, ನಿನ್ನ ಹೃದಯ ದೇವರಿಗಾಗಿ ಕಾತರ ಪಡಲಿ" ಎಂದು.

**೨. ಕಾಮಕಾಂಚನಗಳನ್ನು ತ್ಯಜಿಸಿದರೆ ಮಾತ್ರವೇ ವ್ಯಾಕುಲತೆಯು ಸಹಜವಾಗಿ ಬರುತ್ತದೆ:** ಶ್ರೀರಾಮಕೃಷ್ಣರು ತಮ್ಮ ಬೋಧನೆಗಳಲ್ಲಿ ಮತ್ತೆ ಮತ್ತೆ ಹೇಳುವ ವಿಷಯವೇ ಇದು. ಅವರು ಹೇಳುತ್ತಾರೆ, "ನೀನು ಹುಚ್ಚನಾಗಬೇಕಾದರೆ, ವಿಷಯವಸ್ತುಗಳಿಗಾಗಿ ಆಗಬೇಡ, ಭಗವಂತನ ಪ್ರೇಮದಿಂದ ಹುಚ್ಚನಾಗು." ಅವರ ಪ್ರಕಾರ, ವ್ಯಾಕುಲತೆ ಎನ್ನುವುದು ಕಾಮಕಾಂಚನದಲ್ಲಿ ಮುಳುಗಿರುವವರಿಗೆ ಬರುವುದಿಲ್ಲ, ಸಂಸಾರದ ಅನುಭವ ತೀರಿದ ಮೇಲೆಯೇ ವ್ಯಾಕುಲತೆ ಬರುತ್ತದೆ. ಮಗು ಆಟವಾಡುತ್ತಿರುವಂತೆ ನಾವು ಪ್ರಾಪಂಚಿಕ ವಸ್ತುಗಳಲ್ಲಿ ಆಸಕ್ತರಾಗಿರುತ್ತೇವೆ. ಅಲ್ಲಿಯ ತನಕ ದೇವರ ನೆನಪು ನಮಗೆ ಬರುವುದಿಲ್ಲ. ಯಾವಾಗ ಆಟ ಸಾಕಾಗುತ್ತದೆಯೋ, ಆಗ ಮಗುವಿಗೆ ಅಮ್ಮ ಬೇಕಾಗುತ್ತಾಳೆ. ಹಾಗೆಯೇ, ಯಾರಿಗೆ ಪ್ರಾಪಂಚಿಕತೆ ಸಾಕಾಗಿದೆಯೋ, ಅವನಿಗೆ ದೇವರು ಬೇಕಾಗುವನು; ಅಂಥವನು ದೇವರಿಗಾಗಿ ಹಂಬಲಿಸುವನು ಎಂದು ಶ್ರೀರಾಮಕೃಷ್ಣರು ಹೇಳುತ್ತಾರೆ.

**೩. ಮಗುವಿನಂತೆ ದೇವರನ್ನು ಕರೆಯಬೇಕು :** ಶ್ರೀರಾಮಕೃಷ್ಣರ ಪ್ರಕಾರ ಭಗವಂತನಿಗಾಗಿ ವ್ಯಾಕುಲತೆ ಎಂದರೆ ಇದೇ. ಇದಕ್ಕೆ ನಿದರ್ಶನವಾಗಿ ತಮ್ಮ ಸೋದರಳಿಯ ಹೃದಯನ ಮಗನ ಉದಾಹರಣೆಯನ್ನು ಅವರು ನೀಡುತ್ತಾರೆ. ಅದನ್ನು ಅವರ ಮಾತುಗಳಲ್ಲಿಯೇ ಕೇಳೋಣ: "ನಾನು ಕಾಮಾರಪುಕುರದಲ್ಲಿರುವಾಗ ಹೃದಯನ ಮಗನಿಗೆ ವಯಸ್ಸು ನಾಲ್ಕೋ, ಐದೋ. ಅವನು ದಿನವಿಡೀ ನನ್ನ ಜೊತೆಗೇ ಕಾಲ ಕಳೆಯುತ್ತಿದ್ದನು. ಆಟವಾಡುತ್ತಿರುವಾಗ ಎಲ್ಲವನ್ನೂ ಮರೆತುಬಿಡುತ್ತಿದ್ದನು. ಸಂಜೆಯಾದಾಗ ಮಾತ್ರ, 'ನಾನು ಅಮ್ಮನ ಬಳಿಗೆ ಹೋಗಬೇಕು' ಎಂದು ಹಠ ಹಿಡಿಯುತ್ತಿದ್ದನು. ನಾನು ಹೇಗೋ ಮಾಡಿ ಅವನ ಮನಸ್ಸನ್ನು ಬೇರೆ ಕಡೆ ತಿರುಗಿಸಲು ಯತ್ನಿಸುತ್ತಿದ್ದೆ. 'ನೋಡು, ನಿನಗೊಂದು ಪಾರಿವಾಳದ ಹಕ್ಕಿಯನ್ನು ತಂದುಕೊಡುತ್ತೇನೆ' ಎಂದು ಹೇಳಿದೆ. ಆ ಮಗುವಿಗೆ ಅದರಿಂದ ಸಮಾಧಾನವಾಗಲಿಲ್ಲ. ಅಳುತ್ತ, 'ನಾನು ಅಮ್ಮನ ಬಳಿಗೆ ಹೋಗಬೇಕು' ಎಂದು ಹಠ ಹಿಡಿಯುತ್ತಿದ್ದನು. ಅವನಿಗೆ ಇನ್ನು ಆಟ ಹಿಡಿಸದಾಯಿತು. ಅಮ್ಮನಿಗಾಗಿ ಅವನ ಕಾತರತೆಯನ್ನು ಕಂಡು ನನಗೇ ಕಣ್ಣಲ್ಲಿ ನೀರು ಬರುತ್ತಿತ್ತು."

ಶ್ರೀರಾಮಕೃಷ್ಣರು ಇನ್ನೊಂದು ಸಂದರ್ಭದಲ್ಲಿ ಹೀಗೆ ಹೇಳುವರು: "ಮಗುವಿಗೆ ಆಟದ ಸಾಮಾನಿನಲ್ಲಿ ಬೇಸರವಾದಾಗ ಅದನ್ನು ಎಸೆದು, ಜೋರಾಗಿ ತಾಯಿಗಾಗಿ ಕೂಗಿಕೊಳ್ಳುವುದು. ಆಗ ತಾಯಿಯು ಹೆಚ್ಚು ಕಾಲ ಅಡುಗೆಮನೆಯಲ್ಲಿ ಇರಲಾರಳು. ಒಲೆಯ ಮೇಲಿಂದ ಅನ್ನದ ಪಾತ್ರೆಯನ್ನು ಕೂಡ ಕೆಳಗಿಟ್ಟು, ಓಡಿಬಂದು, ಮಗುವನ್ನು ಎತ್ತಿಕೊಳ್ಳುವಳು."

ಇನ್ನೊಂದು ಬಗೆಯಲ್ಲಿಯೂ ಮಗುವಿನ ನಿದರ್ಶನವನ್ನು ಶ್ರೀರಾಮಕೃಷ್ಣರು ನೀಡುವರು. ಮಗುವು ಕಾಡಿ ಬೇಡಿ, ತನಗೆ ಇಷ್ಟವಾದ ವಸ್ತುಗಳನ್ನು ತಾಯಿತಂದೆಗಳಿಂದ ಪಡೆದುಕೊಳ್ಳುತ್ತದೆ. ಹಾಗೆಯೇ, ದೇವರನ್ನು ಕೂಡ ತನ್ನ ಅತಿನಿಕಟ ಬಂಧುವೆಂದು, ಅತಿ ಪ್ರೀತಿಪಾತ್ರನೆಂದು ತಿಳಿದುಕೊಂಡು, ಅವನಿಗಾಗಿ ಅಂತರಂಗದಲ್ಲಿ ಅತಿ ತೀವ್ರವಾಗಿ ವ್ಯಾಕುಲಪಟ್ಟರೆ, ಅಂಥವರಿಗೆ ಕೊನೆಗೆ ದೇವರು ಪ್ರತ್ಯಕ್ಷನಾಗುತ್ತಾನೆ. ಶ್ರೀರಾಮಕೃಷ್ಣರು ಹೇಳುತ್ತಾರೆ, "ಸಾಧಕನ ಶಕ್ತಿ ಇರುವುದೆಲ್ಲಿ? ಅವನು ದೇವರ ಮಗು; ಕಂಬನಿಯೇ ಅವನ ಪರಮಶಕ್ತಿ. ಅತ್ತು ಬೇಡುವ ಮಗುವಿನ ಆಸೆಗಳನ್ನು ತಾಯಿ ತೃಪ್ತಿಪಡಿಸುವಂತೆ, ಯಾವುದಕ್ಕಾಗಿ ತನ್ನ ಭಕ್ತನು ಅಳುತ್ತಿರುವನೋ ಅದನ್ನು ಭಗವಂತನು ಈಡೇರಿಸುವನು."

**೪. ಕಾತರತೆಯೇ ವ್ಯಾಕುಲತೆಯ ಲಕ್ಷಣ :** ಭಗವಂತನನ್ನು ನೋಡಬೇಕು ಎಂದು ಮಗುವಿನಂತೆ ಕಾತರರಾಗಿರಬೇಕು ಎಂದು ಶ್ರೀರಾಮಕೃಷ್ಣರು ಹೇಳಿದ್ದನ್ನು ಈಗಾಗಲೇ ನೋಡಿದ್ದೇವೆ. ಇದರ ಬಗ್ಗೆ ಅವರು ಹೇಳುತ್ತಿದ್ದರು, "ನಾನು ನಿಜವಾಗಿ ನಿಮಗೆ ಹೇಳುತ್ತೇನೆ, ಕೇಳಿ. ಯಾರಿಗೆ ದೇವರು ಬೇಕೋ ಅವರಿಗೆ ಅವನು ಸಿಗುತ್ತಾನೆ. ನಿಜವಾದ ಉತ್ಸಾಹದಿಂದ ಪ್ರಯತ್ನಪಡಿ. ನೀವು ಖಂಡಿತವಾಗಿಯೂ ಮುಂದುವರಿಯುತ್ತೀರಿ." ಇದಕ್ಕೆ, ಹಳ್ಳಿಗಳಲ್ಲಿ ನಡೆಯುವ ಬಯಲಾಟದ ಉದಾಹರಣೆಯನ್ನು ಅವರು ಕೊಡುತ್ತಾರೆ. ಅದು ಹೀಗಿದೆ:

ಕೃಷ್ಣಚರಿತ್ರೆಯ ಬಯಲಾಟ ಆರಂಭವಾಗಿದೆ. ಹಾಡುಗಾರರು, "ಹೇ ಕೃಷ್ಣ ಬಾ! ನನ್ನ ಪ್ರಿಯನೇ ಬಾ!" ಎಂದು ಮದ್ದಲೆ ಬಾರಿಸುತ್ತ ಹಾಡುತ್ತಿರುತ್ತಾರೆ. ಆದರೆ ಕೃಷ್ಣನ ಪಾತ್ರವನ್ನು ಹಾಕುವವನು ಅದನ್ನು ಲೆಕ್ಕಿಸುವುದೇ ಇಲ್ಲ. ಅವನು ರಂಗಭೂಮಿಯ ಹಿಂದುಗಡೆ ಗುಡಿಗುಡಿ ಸೇದುತ್ತಾ, ಹರಟೆ ಹೊಡೆಯುತ್ತಿರುತ್ತಾನೆ. ಎಷ್ಟು ಹಾಡಿದರೂ ಬರುವುದೇ ಇಲ್ಲ. ಕಡೆಗೆ ಹಾಡು ನಿಲ್ಲುತ್ತದೆ. ಭಕ್ತ ನಾರದನು ರಂಗವನ್ನು ಪ್ರವೇಶಿಸುತ್ತಾನೆ; ಪ್ರೇಮೋನ್ಮತ್ತನಾಗಿ ಮಧುರವಾಗಿ, ಮೃದುಸ್ವರದಲ್ಲಿ, "ಕೃಷ್ಣಾ, ಮೈದೋರಲಾರೆಯಾ?" ಎಂದು ಪ್ರಾರ್ಥಿಸುತ್ತಾನೆ. ಆಗ ಕೃಷ್ಣನಿಗೆ ಅದನ್ನು ಕೇಳಿ ಸುಮ್ಮನಿರುವುದಕ್ಕೆ ಆಗುವುದಿಲ್ಲ. ಅವಸರಪಟ್ಟುಕೊಂಡು, ರಂಗವನ್ನು ಅವನು ಪ್ರವೇಶಿಸುತ್ತಾನೆ. ಶ್ರೀರಾಮಕೃಷ್ಣರು ಹೇಳುತ್ತಾರೆ, "ಸಾಧಕನು ಎಲ್ಲಿಯವರೆಗೆ ಸುಮ್ಮನೆ ಬಾಯಿಮಾತಿನಲ್ಲಿ 'ದೇವರೇ, ಬಾ' ಎಂದು ಕರೆಯುತ್ತಿರುತ್ತಾನೋ, ಅಲ್ಲಿಯವರೆಗೆ ದೇವರು ಕಾಣಿಸುವುದಿಲ್ಲ. ಭಕ್ತನು ಹೃದಯಾಂತರಾಳದಿಂದ ಪ್ರೇಮೋನ್ಮತ್ತನಾಗಿ ದೇವರನ್ನು ಪ್ರಾರ್ಥಿಸಿದರೆ ಮಾತ್ರ, ಅವನು ಬೇಗ ಬರದೆ ಇರಲಾರ."

ಒಬ್ಬ ಭಕ್ತ ಶ್ರೀರಾಮಕೃಷ್ಣರನ್ನು ಹೀಗೆ ಕೇಳಿಕೊಂಡನಂತೆ : "ನನಗೆ ಈಗ ಐವತ್ತೈದು ವರ್ಷ ವಯಸ್ಸು. ಹದಿನಾಲ್ಕು ವರ್ಷಗಳಿಂದ ದೇವರನ್ನು ಹುಡುಕುವುದರಲ್ಲಿ ನಿರತನಾಗಿದ್ದೇನೆ. ನನ್ನ ಗುರುಗಳು ಉಪದೇಶಿಸಿದಂತೆ ನಡೆದುಕೊಳ್ಳುತ್ತಿದ್ದೇನೆ. ಎಲ್ಲಾ ತೀರ್ಥಯಾತ್ರೆಗಳನ್ನೂ ಮಾಡಿಮುಗಿಸಿದ್ದೇನೆ. ಎಷ್ಟೋ ಜನ ಸಾಧುಸಂತರ ದರ್ಶನವನ್ನೂ ಪಡೆದುಕೊಂಡಿದ್ದೇನೆ. ಆದರೂ ನನಗೆ ಏನೂ ಲಭಿಸಲಿಲ್ಲ." ಅದಕ್ಕೆ ಶ್ರೀರಾಮಕೃಷ್ಣರು ಹೇಳಿದರು, "ನಾನು ನಿನಗೆ ಭರವಸೆ ಕೊಡುತ್ತೇನೆ. ಯಾರು ಅವನಿಗಾಗಿ ಕಾತರರಾಗಿರುವರೋ, ಅವರು ಅವನನ್ನು ಪಡೆಯುತ್ತಾರೆ. ನನ್ನನ್ನು ನೋಡಿದ್ದೀಯೆಲ್ಲ, ಧೈರ್ಯತಾಳು."

**೫. ವ್ಯಾಕುಲತೆಯಲ್ಲಿ ಸ್ವಪ್ರಯತ್ನದ ಜೊತೆಗೆ ಶರಣಾಗತಿಯೂ ಮಿಳಿತಗೊಂಡಿರುತ್ತದೆ:** ಇದು ತುಂಬಾ ಸ್ವಾರಸ್ಯವಾದ ವಿಚಾರ. ಭಕ್ತಿಯಲ್ಲಿ ಸೋಮಾರಿತನವಿರಬಾರದು ಎಂದು ಶ್ರೀರಾಮಕೃಷ್ಣರು ಹೇಳುತ್ತಾರೆ. ಅದೇ ಸಂದರ್ಭದಲ್ಲಿ ಭಗವಂತನ ಇಚ್ಛೆಗೆ ಪೂರ್ಣ ಶರಣಾಗಿರಬೇಕು ಎಂದೂ ಬೋಧಿಸುತ್ತಾರೆ. ಇವೆರಡೂ ಒಮ್ಮೆಲೇ ಇರುವುದು ಹೇಗೆ ಸಾಧ್ಯ? ಒಬ್ಬ ವ್ಯಕ್ತಿ ತನ್ನ ಇಬ್ಬರು ಮಕ್ಕಳೊಡನೆ, ಒಂದು ಬಯಲು ಪ್ರದೇಶದಲ್ಲಿ ನಡೆದುಕೊಂಡು ಹೋಗುತ್ತಿದ್ದನು. ಒಬ್ಬ ಮಗನನ್ನು ತನ್ನ ಸೊಂಟದಲ್ಲಿ ಕೂರಿಸಿಕೊಂಡಿದ್ದನು. ಇನ್ನೊಬ್ಬ ಹುಡುಗನು ತಂದೆಯ ಕೈಹಿಡಿದುಕೊಂಡು ಹೋಗುತ್ತಿದ್ದನು. ಅದೇ ಸಮಯದಲ್ಲಿ ಒಂದು ಹದ್ದು ಮೇಲೆ ಹಾರಾಡುತ್ತಿತ್ತು. ನಡೆಯುತ್ತಿದ್ದ ಹುಡುಗ ಕೈಬಿಟ್ಟು ಆನಂದದಿಂದ ಚಪ್ಪಾಳೆ ತಟ್ಟಿದ.